# ಬೋಧಕ ವೃತ್ತಿ ನೀತಿ ಸಂಹಿತೆ

ಅಖಿಲ ಭಾರತ ಪ್ರಾಥಮಿಕ ಶಿಕ್ಷಕರ ಒಕ್ಕೂಟ (AIPTF)


All India Primary Teachers' Federation
24th Biennial Conference
"Code of Professionals Ethics Workshop"
from 1st to 2nd November 2007
Venue: Hotel Doda's, Jaipur, Rajasthan
श्रद्धेय
अखिल
Conference Theme :

# ಪೀಠಿಕೆ

ಬೋಧನೆ ಒಂದು ವೃತ್ತಿ. ಯಾವುದೇ ವೃತ್ತಿಯಲ್ಲಿಯಾಗಲೀ ಆ ವೃತ್ತಿಯಲ್ಲಿರುವ ವ್ಯಕ್ತಿಗಳಿಂದ ಕೆಲವು ಗುಣಮಟ್ಟಗಳು ಮತ್ತು ನಡವಳಿಕೆಗಳನ್ನು ನಿರೀಕ್ಷಿಸಲಾಗುತ್ತದೆ. ಪ್ರತಿಯೊಬ್ಬ ವೃತ್ತಿನಿರತ ವ್ಯಕ್ತಿಯಿಂದ ಕೆಲವು ನಿರೀಕ್ಷೆಗಳಿರುತ್ತವೆ. ಒಬ್ಬ ವ್ಯಕ್ತಿ, ಜನರು ಒಬ್ಬ ವೃತ್ತಿಪರನಿಂದ ನಿರೀಕ್ಷಿಸುವ ನಡವಳಿಕೆಗಳನ್ನು ತೋರಿದರೆ, ಅವನು/ಅವಳನ್ನು ಒಬ್ಬ ವೃತ್ತಿನಿರತ ವ್ಯಕ್ತಿ ಎಂದು ಅಂಗೀಕರಿಸಲಾಗುತ್ತದೆ.

ಪ್ರತಿಯೊಂದು ವೃತ್ತಿಪರ ಸಂಸ್ಥೆಯೂ ಕೂಡ ತನ್ನ ಸದಸ್ಯರು ಪಾಲಿಸುವುದಕ್ಕಾಗಿ ಕೆಲವು ನೀತಿಗಳನ್ನು ರೂಪಿಸುತ್ತವೆ. ಈ ನೀತಿಗಳು ವೃತ್ತಿಯಿಂದ ವೃತ್ತಿಗೆ ಬೇರೆ ಬೇರೆಯಾಗಿರುತ್ತವೆ. ವೈದ್ಯವೃತ್ತಿಯಲ್ಲಿ ಸಾಮಾನ್ಯವಾಗಿ ತರಬೇತಿ ಮುಗಿದು ವೃತ್ತಿ ಪ್ರಾರಂಭಿಸುವುದಕ್ಕೆ ಮುಂಚೆ ಒಂದು ಪ್ರಮಾಣವಚನ ಸ್ವೀಕಾರ ಮಾಡುತ್ತಾರೆ. ಒಬ್ಬ ವ್ಯಕ್ತಿ ತನ್ನ ವೃತ್ತಿಯಲ್ಲಿ ಅವನ/ಅವಳ ಕಕ್ಷಿದಾರರೊಂದಿಗೆ ನಿರ್ವಹಿಸುವ ನಡವಳಿಕೆಯನ್ನು ಒಂದು ನೀತಿ ಸಂಹಿತೆ ನಿಯಂತ್ರಿಸುತ್ತದೆ.

ಅಖಿಲ ಭಾರತ ಪ್ರಾಥಮಿಕ ಶಿಕ್ಷಕರ ಒಕ್ಕೂಟ, ೧೯೯೭ ರಲ್ಲಿ, ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಲಿಯ ಸಹಯೋಗದಲ್ಲಿ ಬೋಧಕರಿಗಾಗಿ ಒಂದು ವೃತ್ತಿ ನೀತಿ ಸಂಹಿತೆಯನ್ನು ಅಭಿವೃದ್ಧಿಪಡಿಸಿತು. ೨೦೦೫ ರಲ್ಲಿ ಹರಿದ್ವಾರದಲ್ಲಿ ಮತ್ತು ೨೦೦೭ ರಲ್ಲಿ ಜೈಪುರದಲ್ಲಿ ನಡೆದ ಅಖಿಲ ಭಾರತ ಪ್ರಾಥಮಿಕ ಶಿಕ್ಷಕರ ಒಕ್ಕೂಟದ ಸಾಮಾನ್ಯ ಮಂಡಲಿ ಸಭೆಯಲ್ಲಿ ನೀತಿ ಸಂಹಿತೆಯನ್ನು ಚರ್ಚಿಸಲಾಯಿತು ಮತ್ತು ಅದಕ್ಕೆ ಮಾರ್ಪಾಡುಗಳನ್ನು ತರಲಾಯಿತು. ಹರಿದ್ವಾರದಲ್ಲಿ ನಡೆದ ಸಾಮಾನ್ಯ ಮಂಡಲಿ ಸಭೆಯಲ್ಲಿ, AIPTF ಅಧ್ಯಕ್ಷ ಶ್ರೀ ರಾಮ್ ಪಾಲ್ ಸಿಂಗ್ ಅಧ್ಯಕ್ಷತೆಯಲ್ಲಿ ಠರಾವನ್ನು ಅನುಮೋದಿಸಲಾಯಿತು. ಸಾಮಾನ್ಯ ಮಂಡಲಿ ಸದಸ್ಯರು ಜೈಪುರದ ಸಭೆಯಲ್ಲಿ ನೀತಿ ಸಂಹಿತೆಯನ್ನು ಏಕಗ್ರೀವವಾಗಿ ಅನುಮೋದಿಸಿದರು.

ವೃತ್ತಿ ನೀತಿ ಸಂಹಿತೆಯ ಅನುಸರಣೆ ಅವನು/ಅವಳು ತನ್ನ ಕಕ್ಷಿದಾರರಿಗೆ ನೀಡುತ್ತಿರುವ ಸೇವೆಯ ಗುಣಮಟ್ಟವನ್ನು ಹೆಚ್ಚಿಸುತ್ತದೆ. ಜೊತೆಗೆ, ವೃತ್ತಿ ನೀತಿ ಸಂಹಿತೆಯನ್ನು ಪಾಲಿಸುವುದರಿಂದ ಸಮಾಜದಲ್ಲಿ ಆ ವೃತ್ತಿಯ ಘನತೆ ಮತ್ತು ಗೌರವ ಹೆಚ್ಚುತ್ತದೆ.

ವೃತ್ತಿ ನೀತಿ ಸಂಹಿತೆಯ ಅನುಸರಣೆ ಆ ವೃತ್ತಿಯಲ್ಲಿರುವ ಸದಸ್ಯರ ಸ್ವಯಂ ಶಿಸ್ತಿನಿಂದ ಸಾಧ್ಯವಾಗುತ್ತದೆ. ವೃತ್ತಿಪರ ಸಂಸ್ಥೆಗಳು ಕೂಡ ಸದಸ್ಯರು ತಮ್ಮ ಕಕ್ಷಿದಾರರೊಂದಿಗೆ ನಡೆದುಕೊಳ್ಳುವಾಗ ಅವರ ಮತ್ತು ಅವರ ಕಕ್ಷಿದಾರರ ಹಿತದೃಷ್ಟಿಯಿಂದ ನೀತಿ ಸಂಹಿತೆಯನ್ನು ಪಾಲಿಸಬೇಕೆಂದು ತಿಳಿಸುತ್ತವೆ.

ಆದ್ದರಿಂದ, ಸರ್ಕಾರ ನಡೆಸುತ್ತಿರುವ ಶಾಲೆಗಳಲ್ಲಿ ಶಿಕ್ಷಣದ ಮಟ್ಟವನ್ನು ಹೆಚ್ಚಿಸಲು ವೃತ್ತಿ ನೀತಿ ಸಂಹಿತೆಯನ್ನು ಪಾಲಿಸಬೇಕೆಂದು ನಾನು, ಅಖಿಲ ಭಾರತ ಪ್ರಾಥಮಿಕ ಶಿಕ್ಷಕರ ಒಕ್ಕೂಟದ ಸದಸ್ಯರನ್ನು ಪ್ರಾರ್ಥಿಸುತ್ತೇನೆ. ಇದರಿಂದ ನಾವು ದೀರ್ಘಕಾಲದಿಂದ ಪೋಷಿಸಿಕೊಂಡು ಬಂದಿರುವ ಗುರಿ – 'ಎಲ್ಲರಿಗೂ ಉತ್ತಮ ಶಿಕ್ಷಣ'ವನ್ನು ಸಾಧಿಸಲು ಸಾಧ್ಯವಾಗುತ್ತದೆ.

ವೃತ್ತಿ ನೀತಿ ಸಂಹಿತೆಯನ್ನು ಪ್ರತಿಯೊಬ್ಬ ಬೋಧಕರ ಮನೆಬಾಗಿಲಿಗೆ ತಲುಪಿಸಲು ಶೈಕ್ಷಣಿಕ ಮತ್ತು ಹಣಕಾಸಿನ ನೆರವು ನೀಡಿದ್ದಕ್ಕಾಗಿ ವಿಶ್ವ ಬ್ಯಾಂಕ್ ಮುಖ್ಯ ಶಿಕ್ಷಣ ತಜ್ಞ ಶ್ರೀ ಸ್ಯಾಮ್ ಕಾರ್ಲ್‌ಸನ್ ರವರಿಗೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈ ನೀತಿ ಸಂಹಿತೆಗೆ ಅಂತಿಮ ರೂಪ ಕೊಡುವುದಕ್ಕೆ ಶೈಕ್ಷಣಿಕ ಸಹಾಯ ನೀಡಿದ, ವೃತ್ತಿ ವಿಕಾಸ ಕಾರ್ಯಕ್ರಮದ ನಿರ್ದೇಶಕರಾದ ಶ್ರೀಯುತ ಡಾ. ಅಜಿತ್ ಸಿಂಗ್ ರವರಿಗೆ ನನ್ನ ಅನಂತ ಧನ್ಯವಾದಗಳು.

**ಎಸ್. ಈಶ್ವರನ್**
**ಪ್ರಧಾನ ಕಾರ್ಯದರ್ಶಿ, AIPTF**

ನಮ್ಮ ದೇಶದಲ್ಲಿ ಶಿಕ್ಷಣದ ಗುಣಮಟ್ಟ, ಅದರಲ್ಲೂ ಪ್ರಾಥಮಿಕ ಮಟ್ಟದಲ್ಲಿ ತುಂಬಾ ಕಳಪೆ. ಶಾಲಾ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವುದು ನಮ್ಮ ಸಮಾಜದ ಬಹುಮುಖ್ಯ ಕಾಳಜಿಯಾಗಿದೆ. ಶಿಕ್ಷಣದ ಗುಣಮಟ್ಟ ಕಳಪೆಯಾಗಿರುವುದಕ್ಕೆ ಹಲವು ಕಾರಣಗಳಿದ್ದರೂ ಕೂಡ ಶಾಲಾ ಶಿಕ್ಷಣದ ಗುಣಮಟ್ಟ ಕೆಳಗಿಳಿದಿರುವುದಕ್ಕೆ ಪ್ರಮುಖವಾಗಿ ಶಿಕ್ಷಕರೇ ಕಾರಣ ಎಂಬ ಗ್ರಹಿಕೆ ಜನರಲ್ಲಿ ಬಲವಾಗಿ ಬೇರೂರಿದೆ. ಇದರ ಫಲವಾಗಿ ಕಳೆದ ಕೆಲವು ದಶಕಗಳಿಂದ ನಮ್ಮ ಸಮಾಜದಲ್ಲಿ ಶಿಕ್ಷಕರ ಘನತೆ ಮತ್ತು ಗೌರವ ಒಂದೇ ಸಮನೆ ಕೆಳಗಿಳಿಯುತ್ತಿದೆ. ಇದಕ್ಕೆ ಮುಂಚೆ ಶಿಕ್ಷಕರ ಘನತೆ ಮತ್ತು ಗೌರವ ಉನ್ನತ ಮಟ್ಟದಲ್ಲಿತ್ತು.

ಕೆಳಗಿಳಿಯುತ್ತಿರುವ ಶಿಕ್ಷಕರ ಘನತೆ ಮತ್ತು ಗೌರವ ನಮ್ಮಲ್ಲಿ ಎಲ್ಲರಿಗೂ ಒಂದು ತೀವ್ರವಾದ ಸಮಸ್ಯೆಯಾಗಿದೆ. ಅಖಿಲ ಭಾರತ ಪ್ರಾಥಮಿಕ ಶಿಕ್ಷಕರ ಒಕ್ಕೂಟ, ಶಿಕ್ಷಕ ವೃಂದದ, ಅದರಲ್ಲೂ, ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಮಟ್ಟಗಳಲ್ಲಿ, ಘನತೆ ಮತ್ತು ಗೌರವಗಳನ್ನು ಎತ್ತಿ ಹಿಡಿಯುವುದಕ್ಕಾಗಿ ಶ್ರಮಿಸುತ್ತಿದೆ. ಸಾರ್ವಜನಿಕರಲ್ಲಿ, ಅವರ ಮಕ್ಕಳ ಶಿಕ್ಷಣಕ್ಕಾಗಿ ಉತ್ತಮ ಮಟ್ಟದ ಸೇವೆ ಸಲ್ಲಿಸಲಾಗುತ್ತಿದೆ ಎಂಬಂತಹ ವಿಶ್ವಾಸ ಮೂಡಿಸುವುದು ಶಿಕ್ಷಕರ ಜವಾಬ್ದಾರಿ ಎಂಬುದನ್ನು ಗ್ರಹಿಸಲಾಗಿದೆ. ಶಿಕ್ಷಣ ವೃತ್ತಿಯನ್ನು ಆಯ್ದುಕೊಳ್ಳುವ ಒಬ್ಬ ವ್ಯಕ್ತಿ ಅತ್ಯಂತ ಉನ್ನತ ಮಟ್ಟದ ನಡವಳಿಕೆಯನ್ನು ಪ್ರದರ್ಶಿಸುವಂತಹ ಜವಾಬ್ದಾರಿಯನ್ನು ಅವನು/ಅವಳು ನಿರ್ವಹಿಸಬೇಕಾಗುತ್ತದೆ. ಅವನು/ಅವಳು ತಮ್ಮ ಕಾರ್ಯಕ್ಷೇತ್ರದಲ್ಲಿ ಉತ್ಕೃಷ್ಟ ಸಾಧನೆ ಮಾಡಬೇಕಾದ ಅಗತ್ಯವಿದೆ.

ಪ್ರತಿಯೊಂದು ವೃತ್ತಿಗೂ ಕೆಲವು ನಿರ್ದಿಷ್ಟ ಮೌಲ್ಯಗಳು ಮತ್ತು ನೀತಿಗಳು ಇರುತ್ತವೆ. ಬೋಧನಾ ವೃತ್ತಿಯೂ ಕೂಡ ತನ್ನದೇ ನೀತಿಗಳನ್ನು ಹೊಂದಿದೆ. ವೃತ್ತಿಪರ ನೀತಿಗಳ ಅನುಸರಣೆ ಶಿಕ್ಷಕರ ಸ್ಥಾನ ಮತ್ತು ಆತ್ಮಗೌರವವನ್ನು ಹೆಚ್ಚಿಸುವುದಕ್ಕೆ ಮಹತ್ತರ ಕೊಡುಗೆ ನೀಡುತ್ತದೆ ಹಾಗೂ ಸಮಾಜದಲ್ಲಿ ಆ ವೃತ್ತಿಗೆ ಗೌರವ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳು, ತಂದೆತಾಯಿಗಳು/ಪೋಷಕರು, ಸಮಾಜ ಮತ್ತು ದೇಶ, ಮತ್ತು ವೃತ್ತಿಪರ ಸಂಸ್ಥೆಗಳ ವಿಚಾರದಲ್ಲಿ ಅತ್ಯುನ್ನತ ಮಟ್ಟದ ನೈತಿಕ ನಡವಳಿಕೆಯನ್ನು ಹೊಂದುವ ಮತ್ತು ಪ್ರದರ್ಶಿಸುವ ಜವಾಬ್ದಾರಿಯನ್ನು ಶಿಕ್ಷಕರು ಹೊಂದಿದ್ದಾರೆ.

# ಪ್ರಸ್ತಾವನೆ

- ಪ್ರತಿಯೊಂದು ಶಿಶುವೂ ಒಳ್ಳೆಯ ಶಿಕ್ಷಣ ಪಡೆಯುವ ಮೂಲಭೂತ ಹಕ್ಕು ಹೊಂದಿದೆ ಎಂಬುದನ್ನು ಗುರುತಿಸುವುದು;
- ಶಿಕ್ಷಣ ಮಾನವನ ಸರ್ವತೋಮುಖ ವ್ಯಕ್ತಿತ್ವ ವಿಕಾಸದ ಕಡೆಗೆ ದೃಷ್ಟಿ ಹೊಂದಿರಬೇಕೆಂಬುದನ್ನು ಗುರುತಿಸುವುದು;
- ನಮ್ಮ ನೀತಿಗಳ ಮಾರ್ಗದರ್ಶನಗಳಲ್ಲಿ, ಅಂದರೆ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮತ್ತು ಜಾತ್ಯಾತೀತತೆ ಇವುಗಳಲ್ಲಿ ನಂಬಿಕೆ ಬೆಳೆಸಿಕೊಳಬೇಕಾದ ಅಗತ್ಯವನ್ನು ಗ್ರಹಿಸುವುದು;
- ಶಿಕ್ಷಣದ ಮೂಲಕ ನಮ್ಮ ಶ್ರೀಮಂತ ಸಾಂಸ್ಕೃತಿಕ ಪರಂಪರೆ, ರಾಷ್ಟ್ರೀಯ ಜಾಗೃತಿ, ಅಂತಾರಾಷ್ಟ್ರೀಯ ತಿಳಿವಳಿಕೆ ಮತ್ತು ವಿಶ್ವಶಾಂತಿ ಸ್ಥಾಪನೆಗೆ ಒತ್ತಾಸೆ ಕೊಡುವ ಅಗತ್ಯವನ್ನು ಗುರುತಿಸುವುದು;
- ಸಾಮಾಜಿಕ ಸನ್ನಿವೇಶದ ಭಾಗವಾಗಿರುವ ಶಿಕ್ಷಕರು ಜನರ ಅಗತ್ಯಗಳು ಮತ್ತು ಆಕಾಂಕ್ಷೆಗಳನ್ನು ಹಂಚಿಕೊಳ್ಳಬೇಕಾದ ಅಗತ್ಯವನ್ನು ಗುರುತಿಸುವುದು;

- ಬೋಧನೆ ಒಂದು ವೃತ್ತಿ ಎಂದು ಪರಿಗಣಿಸುವ ಅಗತ್ಯವನ್ನು ಅನುಮೋದಿಸುವಾಗ ಉನ್ನತ ಮಟ್ಟದ ಜ್ಞಾನ, ವಿಶೇಷ ಕೌಶಲಗಳು ಮತ್ತು ಅರ್ಪಣಾ ಮನೋಭಾವ, ಇವುಗಳು ಪೂರ್ವಾಪೇಕ್ಷಿತ ಎಂಬುದನ್ನು ಗುರುತಿಸುವುದು;
- ಶಿಕ್ಷಕ ಸಮುದಾಯಕ್ಕೆ ಸಮಾಜದ ಗೌರವ ಮತ್ತು ಬೆಂಬಲ ಬೋಧನೆಯ ಗುಣಮಟ್ಟದ ಮೇಲೆ ಮತ್ತು ಶಿಕ್ಷಕ ವೃತ್ತಿಯ ಮೇಲೆ ಬೋಧಕರಿಗಿರುವ ಮನೋವೃತ್ತಿಯ ಮೇಲೆ ಆಧಾರಪಟ್ಟಿರುತ್ತದೆ ಎಂಬುದನ್ನು ಗ್ರಹಿಸುವುದು; ಮತ್ತು
- ಶಿಕ್ಷಕ ಸಮುದಾಯಕ್ಕೆ ಸ್ವಯಂ–ನಿರ್ದೇಶನ ಮತ್ತು ಸ್ವಯಂ–ಶಿಸ್ತಿನ ಅಗತ್ಯವನ್ನು ಗ್ರಹಿಸುವುದು.

# ವೃತ್ತಿಪರ ನೀತಿ ಸಂಹಿತೆ ಅಂಶಗಳು

## A. ವಿದ್ಯಾರ್ಥಿಗಳ ಸಂಬಂಧದಲ್ಲಿ ಶಿಕ್ಷಕ

*ಶಿಕ್ಷಕ ಕೆಳಕಂಡವುಗಳನ್ನು ಪಾಲಿಸುತ್ತಾನೆ:*

1. ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಸಭೆ (೧೯೮೯) ರ ಉಪಬಂಧಗಳಲ್ಲಿ ಗುರುತಿಸಲಾಗಿರುವ ಮಕ್ಕಳ ಎಲ್ಲ ಹಕ್ಕುಗಳು, ಅದರಲ್ಲೂ ಶಿಕ್ಷಣದ ವಿಚಾರದಲ್ಲಿ ಅನ್ವಯವಾಗುವಂಥ ಹಕ್ಕುಗಳನ್ನು ಗೌರವಿಸುವುದು;
2. ಅವನ/ಅವಳ ವಿದ್ಯಾರ್ಥಿಗಳ ಬೌದ್ಧಿಕ, ಸಾಮಾಜಿಕ ಮತ್ತು ನೈತಿಕ ವಿಕಾಸವನ್ನು ಪೋಷಿಸುವುದಕ್ಕೆ ಸದಾಕಾಲ ಶ್ರಮಿಸುವುದು;
3. ಎಲ್ಲ ಮಕ್ಕಳನ್ನೂ ಪ್ರೀತಿ ಮತ್ತು ವಾತ್ಸಲ್ಯದಿಂದ ನಡೆಸಿಕೊಳ್ಳುವುದು ಮತ್ತು ಜಾತಿ, ಮತ, ಲಿಂಗ, ಸ್ಥಾನ, ಧರ್ಮ, ಭಾಷೆ ಮತ್ತು ಹುಟ್ಟಿದ ಸ್ಥಳ ಮುಂತಾದುವುಗಳ ಬಗ್ಗೆ ನಿಷ್ಪಕ್ಷಪಾತ ತೋರುವುದು;
4. ವಿದ್ಯಾರ್ಥಿಯ ಬಗ್ಗೆ ಗೋಪ್ಯವಾದ ಮಾಹಿತಿಯನ್ನು ವಿದ್ಯಾರ್ಥಿಯ ತಂದೆತಾಯಿಗಳು ಅಥವಾ ಕಾನೂನು ಸಮ್ಮತವಾಗಿ ಮಾಹಿತಿ ಪಡೆಯಲು ಅರ್ಹನಾಗಿರುವ ವ್ಯಕ್ತಿಯನ್ನು ಹೊರತುಪಡಿಸಿ ಇತರ ಯಾರೇ ವ್ಯಕ್ತಿಗೂ ಬಹಿರಂಗಪಡಿಸದಿರುವುದು;
5. ಶಿಕ್ಷಕ ಮತ್ತು ಅವನ/ಅವಳ ವಿದ್ಯಾರ್ಥಿಗಳ ನಡುವೆ ಇರುವ ವಿಶೇಷ ಸಂಬಂಧವನ್ನು ದುರುಪಯೋಗ ಪಡಿಸಿಕೊಳ್ಳದಿರುವುದು;
6. ಅವನ/ಅವಳ ವಿದ್ಯಾರ್ಥಿಗಳ ನೈತಿಕ ಮತ್ತು ಧಾರ್ಮಿಕ ನಂಬಿಕೆಗಳನ್ನು ಗೌರವಿಸುವುದು;
7. ಲೈಂಗಿಕ ನಿಂದನೆ ಅಥವಾ ಎಚ್‌ಐವಿ/ಏಡ್ಸ್ ವಿರುದ್ಧ ಅವನ/ಅವಳ ವಿದ್ಯಾರ್ಥಿಗಳನ್ನು ಸಂರಕ್ಷಿಸಲು ಸಕಲ ಕ್ರಮಗಳನ್ನೂ ತೆಗೆದುಕೊಳ್ಳುವುದು; ಮತ್ತು
8. ವಿದ್ಯಾರ್ಥಿಗಳಿಗೆ ಆದರ್ಶಪ್ರಾಯರಾಗುವ ರೀತಿಯಲ್ಲಿ ಉಡುಗೆ ಮತ್ತು ನಡವಳಿಕೆ ಪ್ರದರ್ಶಿಸುವುದು.

## B. ತಂದೆತಾಯಿಗಳು/ಪೋಷಕರ ಸಂಬಂಧದಲ್ಲಿ ಶಿಕ್ಷಕ

*ಶಿಕ್ಷಕ ಕೆಳಕಂಡವುಗಳನ್ನು ಪಾಲಿಸುತ್ತಾನೆ:*

1. ತಮ್ಮ ಮಕ್ಕಳ ಉನ್ನತಿ ಬಗ್ಗೆ ತಂದೆತಾಯಿಗಳಿಗಿರುವ ಮಾಹಿತಿ ಹಕ್ಕುಗಳನ್ನು ಗುರುತಿಸುವುದು;
2. ತಂದೆತಾಯಿಗಳೊಂದಿಗೆ ಅವಿನಾಭಾವ ಸಂಬಂಧ ಇಟ್ಟುಕೊಳ್ಳುವುದು ಹಾಗೂ ನಿರ್ವಹಿಸುವುದು ಮತ್ತು ಅವರ ಮಕ್ಕಳ ಕಲಿಕೆ ಸಾಮರ್ಥ್ಯವನ್ನು ಹಾಗೂ ಶಾಲೆಯ ಕಾರ್ಯಾಚರಣೆಗಳನ್ನು ಉತ್ತಮಪಡಿಸುವುದಕ್ಕೆ ಅವರ ಸಹಕಾರವನ್ನು ಪಡೆಯುವುದು; ಮತ್ತು

3. ವಿದ್ಯಾರ್ಥಿಗಳು ತಮ್ಮ ತಂದೆತಾಯಿಗಳು ಅಥವಾ ಪೋಷಕರ ಬಗ್ಗೆ ಹೊಂದಿರುವ ನಂಬಿಕೆಯನ್ನು ಹಾಳುಮಾಡುವಂತಹ ಯಾವುದನ್ನೂ ಮಾಡದಿರುವುದು.

## C. ಸಮಾಜ ಮತ್ತು ದೇಶದ ಸಂಬಂಧದಲ್ಲಿ ಶಿಕ್ಷಕ

*ಶಿಕ್ಷಕ ಕೆಳಕಂಡವುಗಳನ್ನು ಪಾಲಿಸುತ್ತಾನೆ:*

1. ಸಾಮಾಜಿಕ ಸಮಸ್ಯೆಗಳನ್ನು ಅರಿತುಕೊಳ್ಳಲು ಶ್ರಮಿಸುವುದು ಮತ್ತು ಆ ಸಮಸ್ಯೆಗಳು ಒಡ್ಡಿರುವ ಸವಾಲುಗಳನ್ನು ಎದುರಿಸಲು ನೆರವಾಗುವಂತಹ ಚಟುವಟಿಕೆಗಳಲ್ಲಿ ಭಾಗವಹಿಸುವುದು;
2. ವಿವಿಧ ಸಮುದಾಯಗಳು, ಧಾರ್ಮಿಕ ಮತ್ತು ಭಾಷಾ ಗುಂಪುಗಳ ನಡುವೆ ದ್ವೇಷ ಅಥವಾ ಶತೃತ್ವ ಭಾವನೆಗಳನ್ನು ಹರಡುವಂತಹ ಸಾಮರ್ಥ್ಯವುಳ್ಳ ಯಾವುದೇ ಚಟುವಟಿಕೆಗಳಲ್ಲಿ ಭಾಗವಹಿಸದಿರುವುದು;
3. ಶಾಲೆ, ಸಮುದಾಯ, ರಾಜ್ಯ ಮತ್ತು ರಾಷ್ಟ್ರಕ್ಕೆ ನಿಷ್ಠೆಯಿಂದಿರುವುದು;
4. ಅವನ/ಅವಳ ವಿದ್ಯಾರ್ಥಿಗಳಿಗೆ ಅಪೇಕ್ಷಣೀಯ ಮಾನವೀಯ ಮೌಲ್ಯಗಳನ್ನು ಬೋಧಿಸುವುದು;
5. ರಾಷ್ಟ್ರೀಯ ಭಾವೈಕ್ಯತೆಯನ್ನು ಪೋಷಿಸುವುದು; ಮತ್ತು
6. ಸಂವಿಧಾನದಲ್ಲಿ ನೆಲೆಯಾಗಿರುವ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸುವಂತೆ ಅವನ/ಅವಳ ವಿದ್ಯಾರ್ಥಿಗಳನ್ನು ಪ್ರಚೋದಿಸುವುದು.

## D. ವೃತ್ತಿ ಮತ್ತು ಸಹೋದ್ಯೋಗಿಗಳ ಸಂಬಂಧದಲ್ಲಿ ಶಿಕ್ಷಕ

*ಶಿಕ್ಷಕ ಕೆಳಕಂಡವುಗಳನ್ನು ಪಾಲಿಸುತ್ತಾನೆ:*

1. ಎಲ್ಲ ಮಕ್ಕಳಿಗೂ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುವ ಮೂಲಕ ಸಾರ್ವಜನಿಕರ ನಂಬಿಕೆ ಮತ್ತು ವಿಶ್ವಾಸವನ್ನು ಗಳಿಸುವುದು;
2. ಪಠ್ಯ ವಿಷಯಗಳ ಬಗ್ಗೆ ಅವನ/ಅವಳ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದು ಮತ್ತು ನಿರಂತರವಾಗಿ ತನ್ನ ಬೋಧನಾ ಸಾಮರ್ಥ್ಯವನ್ನು ಉತ್ತಮಪಡಿಸಿಕೊಳ್ಳುವುದು;
3. ವೃತ್ತಿಪರತೆ ಭಾವನೆ ಬೆಳೆಸಿಕೊಳ್ಳುವುದು;
4. ಬೋಧಿಸಬೇಕಾದ ಪಾಠಗಳ ಬಗ್ಗೆ ಅತ್ಯುತ್ತಮ ತಯಾರಿ ನಡೆಸಿ ಪಠ್ಯವಸ್ತುಗಳ ಬೋಧನಾ ಕ್ರಿಯೆಯನ್ನು ಪರಿಣಾಮಕಾರಿಯಾಗಿಸುವುದು;
5. ಸಹೋದ್ಯೋಗಿಗಳ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ಕೊಡದಿರುವುದು, ಅದರಲ್ಲೂ ವಿದ್ಯಾರ್ಥಿಗಳು, ಇತರ ಅಧ್ಯಾಪಕರು, ಅಧಿಕಾರಿಗಳು ಅಥವಾ ತಂದೆತಾಯಿಗಳ ಸಮಕ್ಷಮದಲ್ಲಿ;
6. ಸಂಸ್ಥೆಯ ಮುಖ್ಯಾಧಿಕಾರಿ ಮತ್ತು ಸಹೋದ್ಯೋಗಿಗಳಿಗೆ ಶಾಲೆಯ ಒಳಗೆ ಮತ್ತು ಹೊರಗೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಹಕಾರ ನೀಡುವುದು;
7. ಸಹೋದ್ಯೋಗಿಗಳ ವಿಚಾರದಲ್ಲಿ ಅವರ ವೃತ್ತಿ ನಿಪುಣತೆ ಮತ್ತು ಅಭಿಪ್ರಾಯಗಳನ್ನು ಗೌರವಿಸುವ ಮೂಲಕ ಅವರೊಂದಿಗೆ ಶೈಕ್ಷಣಿಕ ಸಂಬಂಧ ವೃದ್ಧಿಪಡಿಸುವುದು;
8. ಸಹೋದ್ಯೋಗಿಗಳ ಆಸಕ್ತಿಗಳನ್ನು ಮತ್ತು ಸಂಕ್ಷೇಮವನ್ನು ಬೆಂಬಲಿಸುವುದು ಹಾಗೂ ಸಂರಕ್ಷಿಸುವುದು;
9. ಶಿಕ್ಷಕ ವೃತ್ತಿಯ ಬಗ್ಗೆ ಔದಾರ್ಯ ಮನೋಭಾವನೆ ಇಟ್ಟುಕೊಳ್ಳುವುದು;

10. ವೃತ್ತಿಯ ಇತರ ಸದಸ್ಯರನ್ನು, ಅವನು/ಅವಳನ್ನು ಯಾವ ರೀತಿಯಲ್ಲಿ ನಡೆಸಿಕೊಳ್ಳಬೇಕೆಂದು ಅಪೇಕ್ಷಿಸುತ್ತಾರೋ ಅದೇ ರೀತಿಯಲ್ಲಿ ಅವರನ್ನು ನಡೆಸಿಕೊಳ್ಳುವುದು; ಮತ್ತು
11. ಅವನ/ಅವಳ ಸಹೋದ್ಯೋಗಿಗಳ ವಿರುದ್ಧ ನಿರಾಧಾರ ಆರೋಪಗಳನ್ನು ಹೊರಿಸದಿರುವುದು.

## E. ಆಡಳಿತದ ಸಂಬಂಧದಲ್ಲಿ ಶಿಕ್ಷಕ

*ಶಿಕ್ಷಕ ಕೆಳಕಂಡವುಗಳನ್ನು ಪಾಲಿಸುತ್ತಾನೆ:*

1. ಅವನ/ಅವಳ ಕಾನೂನುಸಮ್ಮತ ಮತ್ತು ಆಡಳಿತಾತ್ಮಕ ಹಕ್ಕುಗಳು ಮತ್ತು ಆಡಳಿತ ವ್ಯವಸ್ಥೆಯ ವಿಚಾರದಲ್ಲಿ ತಮ್ಮ ಜವಾಬ್ದಾರಿಗಳ ಬಗ್ಗೆ ಅರಿವು ಹೊಂದಿರುವುದು;
2. ಆಡಳಿತ ಸಿಬ್ಬಂದಿ ಸೂಚನೆಗಳನ್ನು ಪಾಲಿಸುವುದು ಮತ್ತು ಸ್ಪಷ್ಟವಾಗಿ ನಿಗದಿಪಡಿಸಲಾಗಿರುವ ವಿಧಾನ ಮತ್ತು ಮಾರ್ಗದಲ್ಲಿ ಸೂಚನೆಗಳನ್ನು ಪ್ರಶ್ನಿಸುವ ಹಕ್ಕುಗಳನ್ನು ಹೊಂದಿರುವುದು; ಮತ್ತು
3. ಅವನ/ಅವಳ ವೃತ್ತಿಪರ ಚಟುವಟಿಕೆಗಳು ಮತ್ತು ಸಾಧನೆಗಳ ಮೂಲಕ ಪರಸ್ಪರ ಗೌರವ ಮತ್ತು ನಂಬಿಕೆಯನ್ನು ಅಭಿವೃದ್ಧಿಪಡಿಸುವುದು.

## F. ಶಿಕ್ಷಕರ ಸಂಘದ ಸಂಬಂಧದಲ್ಲಿ ಶಿಕ್ಷಕ

*ಶಿಕ್ಷಕ ಕೆಳಕಂಡವುಗಳನ್ನು ಪಾಲಿಸುತ್ತಾನೆ:*

1. ರಾಜ್ಯ/ರಾಷ್ಟ್ರ/ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಕರ ಸಂಘದ ಸದಸ್ಯನಾಗುವುದು. ಅವನು/ಅವಳು ಇದನ್ನು ತಮ್ಮ ವೃತ್ತಿಪರ ಜವಾಬ್ದಾರಿ ಎಂದು ಪರಿಗಣಿಸುವುದು;
2. ಅವನ/ಅವಳ ವೃತ್ತಿ ವಿಕಸನಕ್ಕಾಗಿ ಮತ್ತು ಸಂಘದ ಶಕ್ತಿವೃದ್ಧಿ ಹಾಗೂ ಅದರ ಏಕತೆ ಮತ್ತು ಐಕಮತ್ಯಕ್ಕಾಗಿ ಶಿಕ್ಷಕರ ಸಂಘ ಆಯೋಜಿಸುವ ಚಟುವಟಿಕೆಗಳಲ್ಲಿ ಭಾಗವಹಿಸುವುದು;
3. ಸಂಘದ ಚಟುವಟಿಕೆಗಳ ಬಗ್ಗೆ ಅವನ/ಅವಳ ಟೀಕೆಗಳು ಸಕಾರಾತ್ಮಕವಾಗಿರಬೇಕು; ಮತ್ತು
4. ಸಂಘದ ಏಳಿಗೆಗಾಗಿ ಶಿಕ್ಷಕ ಸಂಘದೊಳಗೆ ಬದಲಾವಣೆಗಳನ್ನು ಉತ್ತೇಜಿಸಬೇಕು.

ಅಖಿಲ ಭಾರತ ಪ್ರಾಥಮಿಕ ಶಿಕ್ಷಕರ ಒಕ್ಕೂಟ
ಜೈಪುರದಲ್ಲಿ 24ನೇ ದ್ವೈವಾರ್ಷಿಕ ಸಮಾವೇಶ
ಈ ಸಮಾವೇಶದಲ್ಲಿ ಶಿಕ್ಷರ ವೃತ್ತಿ ನೀತಿ ಸಂಹಿತೆಯನ್ನು
ಏಕಗ್ರೀವವಾಗಿ ಅನುಮೋದಿಸಲಾಯಿತು
ದಿನಾಂಕ 3ನೇ ಮತ್ತು 4ನೇ ನವೆಂಬರ್ 2007




**ಕಾರ್ಯಾಚರಣೆಯಲ್ಲಿ ಐಕಮತ್ಯ**

**ಅಖಿಲ ಭಾರತ ಪ್ರಾಥಮಿಕ ಶಿಕ್ಷಕರ ಒಕ್ಕೂಟ (AIPTF)**
ಶಿಕ್ಷಕ್ ಭವನ್, 41–ಇಂಡಸ್ಟ್ರಿಯಲ್ ಏರಿಯಾ
ಡಿ–ಬ್ಲಾಕ್, ಜಣಕಪುರಿ, ನವ ದೆಹಲಿ–110058
ದೂ: (91-11) 28520671, ಫ್ಯಾಕ್ಸ್: 28525271
ಇ–ಮೈಲ್: aiptfindia@yahoo.com